# ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಮುಂಬೈ ಕರ್ನಾಟಕದ ಪಾತ್ರ: ಒಂದು ಐತಿಹಾಸಿಕ ವಿಶ್ಲೇಷಣೆ

ರಾಜು ಬಜಂತ್ರಿ
ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಥಣಿ.

DOI: https://doi.org/10.5281/zenodo.17292066

## ABSTRACT:

ಕರ್ನಾಟಕದ ಏಕೀಕರಣ ಎಂಬ ಮಹಾನ್ ಕಾರ್ಯದಲ್ಲಿ ನಾಡಿನ ಎಲ್ಲ ಭಾಗದ ಹೋರಾಟಗಾರರು, ಸಂಘ-ಸಂಸ್ಥೆಗಳು, ಪತ್ರಿಕೆಗಳು ಭಾಗವಹಿಸಿದ್ದರೂ, ಏಕೀಕರಣ ಚಳುವಳಿಯಲ್ಲಿ ಮುಂಚೂಣಿ ನಾಯಕತ್ವವನ್ನು ಮತ್ತು ಆರಂಭಿಕ ಹೋರಾಟವನ್ನು ಮುಂಬೈ ಕರ್ನಾಟಕದ ನಾಯಕರುಗಳು ಮತ್ತು ಸಂಘಸಂಸ್ಥೆಗಳು ವಹಿಸಿವೆ. ಮೈಸೂರು ಭಾಗದ ಜನತೆ ಮಹಾರಾಜರ ಆಡಳಿತದ ಅನುಕೂಲತೆಗಳನ್ನು ಮತ್ತು ಭಾಷಾ ಅಸ್ಮಿತೆಯ ಕೊರತೆಯನ್ನು ಅನುಭವಿಸದಿರುವುದೇ ಆ ಭಾಗದಲ್ಲಿ ಏಕೀಕರಣ ಚಳುವಳಿ ಪ್ರಾರಂಭದಲ್ಲಿ ಬೆಳೆದು ಬರದಿರುವುದಕ್ಕೆ ಕಾರಣವಾಗಿದ್ದು, ಆಲೂರು ವೆಂಕಟರಾಯರು ಹೇಳುವಂತೆ, "ಮೈಸೂರು ಸಂಸ್ಥಾನದ ಜನತೆ ತಾಯಿಯ ತೊಡೆಯ ಮೇಲೆ ಮಲಗಿ ಹಾಲು ಕುಡಿದವರು. ಆದ್ದರಿಂದ ಅವರಿಗೆ ಕರ್ನಾಟಕದ ಏಕೀಕರಣದ ಕಲ್ಪನೆ ಇರಲು ಸಾಧ್ಯವಿಲ್ಲ" ಎಂದು ಹೇಳಿದರು. ಮುಂದೆ 1927 ರಲ್ಲಿ ರಾಜಕೀಯ ನಾಯಕರು ಮತ್ತು ಗಣ್ಯರ ಸಹಿ ಪಡೆದು ಕರ್ನಾಟಕ ಏಕೀಕರಣದ ಸಾರ್ವತ್ರಿಕ ಮನವಿಗೆ ಸಹಿ ಮಾಡಿದ ಬಹುತೇಕರು ಮುಂಬೈ ಕರ್ನಾಟಕ ಭಾಗದವರೇ ಆಗಿದ್ದರು. ಒಟ್ಟಿನಲ್ಲಿ ತಮ್ಮ ಭಾಷೆ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಮತ್ತು ಅಸ್ಮಿತೆಗಾಗಿ ಕನ್ನಡಿಗರು ಹೋರಾಡಿದ್ದು, ಈ ಹೋರಾಟಕ್ಕೆ ನಾಂದಿ ಹಾಕಿ ಏಕೀಕೃತ ಕರ್ನಾಟಕದ ರಚನೆಗೆ ಪ್ರಮುಖ ಕೊಡುಗೆಯನ್ನು ಮುಂಬೈ ಕರ್ನಾಟಕ ವಹಿಸಿರುವುದನ್ನು ನೋಡಬಹುದು.

## KEYWORDS:

ಏಕೀಕರಣ ಚಳುವಳಿ, ಮುಂಬೈ ಕರ್ನಾಟಕ, ಅಸ್ಮಿತೆ, ಪ್ರೇರಣೆ, ಏಕತೆ.

### ಪ್ರಸ್ತಾವನೆ:

"ದೇಶ ನನ್ನದು, ನಾಡು ನನ್ನದು, ಎನ್ನದ ಮಾನವನ ಎದೆ ಸುಡುಗಾಡು" ಎಂಬ ಕುವೆಂಪು ಅವರ ವಾಣಿಯಂತೆ ಕರ್ನಾಟಕದ ಮಣ್ಣಿನಲ್ಲಿ ಜನಿಸಿರುವ ನಾವೆಲ್ಲ ಕರ್ನಾಟಕದ ಐತಿಹಾಸಿಕ ಹಿನ್ನಲೆಯನ್ನು ತಿಳಿಯುವುದರೊಂದಿಗೆ ಕರ್ನಾಟಕದ ಏಕೀಕರಣದ ಅಡಿಪಾಯ ರೂಪಗೊಂಡಿದ್ದೇ ಮುಂಬೈ ಕರ್ನಾಟಕದಿಂದ. ಏಕೀಕರಣದ ಈ ಮಹಾನ್ ಕಾರ್ಯಕ್ಕಾಗಿ ಶ್ರಮಿಸಿದ ಮುಂಬೈ ಕರ್ನಾಟಕದ ನಾಯಕರು, ಸಂಘ-ಸಂಸ್ಥೆಗಳು, ಪತ್ರಿಕೆಗಳು ಮುಂತಾದವರ ಪಾತ್ರವನ್ನು ತಿಳಿಯುವುದು ಈ ಸಂಶೋಧನಾ ಲೇಖನದ ಮುಖ್ಯ ಉದ್ದೇಶವಾಗಿದೆ. ಇತಿಹಾಸ ಪೂರ್ವಕಾಲದಿಂದ ಆರಂಭಿಸಿ ಅಶೋಕನ ಶಾಸನಗಳಲ್ಲಿ ಕನ್ನಡ ನಾಡಿನ ಮಾಹಿತಿ ದೊರೆಯುತ್ತದೆ. ರಾಜಪ್ರಭುತ್ವಗಳ ಕಾಲದಲ್ಲಿ ಆಳುವ ರಾಜನ ಸಾಮರ್ಥ್ಯ ಆಧರಿಸಿ ರಾಜ್ಯದ ಭೌಗೋಳಿಕ ಗಡಿಗಳು ನಿರ್ಧಾರಿತವಾಗುತ್ತಿದ್ದರಿಂದ ಹಿಂದೆ ಕರ್ನಾಟಕದ ಗಡಿಯು ಕ್ರಿ.ಶ 9ನೇ ಶತಮಾನದ ಕವಿರಾಜ ಮಾರ್ಗ ಕೃತಿ ತಿಳಿಸುವಂತೆ "ಕಾವೇರಿಯಿಂದ ಮಾ ಗೋದಾವರಿವರಮರ್ದ ನಾಡು, ಕನ್ನಡ ನಾಡು" ಎಂಬುದನ್ನು ಮತ್ತು ಕಲ್ಯಾಣ ಚಾಲುಕ್ಯರ

ಕಾಲಕ್ಕೆ ಉತ್ತರದಲ್ಲಿ ಗೋದಾವರಿಯನ್ನು ದಾಟಿ ಬಹುತೇಕ ಮಹಾರಾಷ್ಟ್ರದ ಮಧ್ಯದವರೆಗೂ ಹಾಗೂ ಪೂರ್ವದಲ್ಲಿ ಆಂಧ್ರದ ಓರಂಗಲ್ಲನ್ನೂ ಒಳಗೊಂಡಿದ್ದನ್ನು ನೋಡಬಹುದು. ಹೀಗೆ ಬಹು ವಿಶಾಲ ಪ್ರದೇಶವನ್ನು ಹೊಂದಿದ್ದ ಕರ್ನಾಟಕ ಮುಂದೆ ದುರ್ಬಲ ರಾಜಪ್ರಭುತ್ವಗಳು, ಬ್ರಿಟಿಷರ ಆಗಮನದಿಂದ ವಿವಿಧ ಭಾಷಿಕ ಪ್ರಾಂತ್ಯಗಳಲ್ಲಿ ಹಂಚಿ ಹೋದ ಪರಿಣಾಮವಾಗಿ ಕನ್ನಡ ನಾಡು, ನಾಡಿನ ಭಾಷೆಗೆ ಒದಗಿದ ಕುತ್ತು, ಕನ್ನಡಿಗರನ್ನು ಒಗ್ಗೂಡಿಸಬೇಕೆಂಬ ಹೋರಾಟ, ಅಸ್ಮಿತೆಯ ಅರಿವು ಎಲ್ಲವೂ ಕೂಡಿಕೊಂಡು ರೂಪಿತವಾಗಿದ್ದೇ ಕರ್ನಾಟಕ ಏಕೀಕರಣ ಚಳುವಳಿಯಾಗಿದೆ. ಈ ಚಳುವಳಿಯ ನೇತೃತ್ವ ವಹಿಸಿದ ಮಹಾನ್ ನಾಯಕರು, ಸಂಘಸಂಸ್ಥೆಗಳು, ಪತ್ರಿಕೆಗಳು ಮುಂತಾದವುಗಳ ಅವಿರತ ಶ್ರಮದಿಂದ ರೂಪಿತವಾದದ್ದು ಕರ್ನಾಟಕ.

**ಸಂಶೋಧನೆಯ ಉದ್ದೇಶಗಳು :**

1. ವಿವಿಧ ಪ್ರಾಂತ್ಯಗಳ ಆಡಳಿತಕ್ಕೆ ಒಳಪಟ್ಟಿದ್ದ ಕನ್ನಡಿಗರ ಸ್ಥಿತಿಗಳನ್ನು ತಿಳಿಯುವುದು.
2. ಏಕೀಕರಣಕ್ಕೆ ಕಾರಣವಾದ ಐತಿಹಾಸಿಕ ಅಂಶಗಳನ್ನು ವಿಶ್ಲೇಷಿಸುವುದು.
3. ಕರ್ನಾಟಕದ ಏಕೀಕರಣದ ಸಂದರ್ಭದಲ್ಲಿ ಘಟಿಸಿದ ಪ್ರಮುಖ ಘಟನೆಗಳನ್ನು ಅರಿಯುವುದು.
4. ಕರ್ನಾಟಕ ಏಕೀಕರಣದಲ್ಲಿ ಮುಂಬೈ ಕರ್ನಾಟಕದ ಪಾತ್ರವನ್ನು ವಿಮರ್ಶಿಸುವುದು.

**ಸಂಶೋಧನೆಯ ಮಹತ್ವ :**

ಪ್ರಸ್ತುತ ಸಂಶೋಧನೆಯಲ್ಲಿ ಕರ್ನಾಟಕದ ಐತಿಹಾಸಿಕ ಹಿನ್ನಲೆಯನ್ನು, ವಿಸ್ತಾರವನ್ನು ತಿಳಿಯುವುದರೊಂದಿಗೆ ಕರ್ನಾಟಕ ಏಕೀಕರಣದ ಚಾರಿತ್ರಿಕ ಹಿನ್ನಲೆಯನ್ನು, ಏಕೀಕರಣಕ್ಕೆ ಶ್ರಮಿಸಿದ ಮುಂಬೈ ಕರ್ನಾಟಕದ ಪ್ರಮುಖ ನಾಯಕರು, ಸಂಘಸಂಸ್ಥೆಗಳು ಮತ್ತು ಪತ್ರಿಕೆಗಳ ಪಾತ್ರವನ್ನು ಪ್ರಸ್ತುತ ಸಂಶೋಧನಾ ಲೇಖನದ ಮೂಲಕ ತಿಳಿಯುವುದಾಗಿದೆ.

ಸಂಶೋಧನಾ ವಿಧಾನ : ಸಂಶೋಧನೆ ಎಂಬುದು ದಾಖಲೆಗಳನ್ನು ಸಂಗ್ರಹಿಸುವ, ಸಂಗ್ರಹಿಸಿರುವ ದಾಖಲೆಗಳಿಂದ ಯೋಗ್ಯ ಮಾಹಿತಿಗಳನ್ನು ಆಯ್ದುಕೊಳ್ಳುವ, ಮಾಹಿತಿಯ ವೈಜ್ಞಾನಿಕ ವಿಶ್ಲೇಷಣೆಯ ಆಧಾರದ ಮೇಲೆ ಖಚಿತ ಅಭಿಪ್ರಾಯಕ್ಕೆ ಬರುವ ವಿಧಾನವಾಗಿದ್ದು, ಪ್ರಸ್ತುತ ಸಂಶೋಧನಾ ಲೇಖನವು ದ್ವಿತೀಯ ದತ್ತಾಂಶಗಳ ವಿಶ್ಲೇಷಣಾತ್ಮಕ ವಿಧಾನವನ್ನು ಒಳಗೊಂಡಿದೆ.

**ವಿಶ್ಲೇಷಣೆ :**

**ಐತಿಹಾಸಿಕ ಹಿನ್ನಲೆ**

ಕನ್ನಡ ಮಾತನಾಡುವ ಜನ ನೆಲೆಸಿರುವ ಪ್ರದೇಶವೇ ಕರ್ನಾಟಕವಾಗಿದ್ದು, ಮಹಾಭಾರತದ ಭೀಷ್ಮ ಪರ್ವದಲ್ಲಿ ಮತ್ತು ತಮಿಳಿನ ಪ್ರಾಚೀನ ಕೃತಿಗಳಾದ ಶಿಲಪ್ಪದಿಕಾರಂ ಮತ್ತು ತೋಲ್ಕಾಪ್ಪಯಂಗಳಲ್ಲಿ ಉಲ್ಲೇಖವಿರುವ ಕರುನಾಡಗನ್ ಎಂಬ ಪದ ಕರ್ನಾಟಕ ಎಂಬುದನ್ನು ಸೂಚಿಸುತ್ತದೆ. ಅಶೋಕನ ಶಿಲಾಶಾಸನಗಳು ಯಥೇಚ್ಛವಾಗಿ ಕರ್ನಾಟಕದಲ್ಲಿ ದೊರಕಿದ್ದು, ನಂತರ ಈ ನಾಡನ್ನು ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ಸೇವುಣರು, ವಿಜಯನಗರದ ಅರಸರು, ಶಾಹಿ ಸುಲ್ತಾನರು, ಆದಿಲ್ ಶಾಹಿಗಳು, ಮೈಸೂರಿನ ಅರಸರು, ಅನೇಕ ಸಂಸ್ಥಾನಗಳು, ಅನೇಕ ಪಾಳೇಗಾರರು ಆಳಿದ್ದು ಆಳುವ ದೊರೆಗಳ ಸೈನಿಕ ಬಲದ ಆಧಾರದ

ಮೇಲೆ ರಾಜ್ಯದ ವಿಸ್ತಾರ ನಿಗದಿತವಾಗುತ್ತಿತ್ತು. ಹೀಗೆ ಅನೇಕ ರಾಜ ಮನೆತನಗಳ ಆಡಳಿತದಲ್ಲಿ ಕೆಲವು ಬಾರಿ ವಿಸ್ತಾರತೆಯನ್ನು ಮತ್ತು ಕೆಲವು ಬಾರಿ ಸಂಕುಚಿತ ಭೌಗೋಳಿಕ ಸೀಮೆಯನ್ನು ಹೊಂದಿದ್ದ ಕರ್ನಾಟಕದ ಜನತೆ ಮಾತ್ರ ವಿವಿಧ ಪ್ರಾಂತ್ಯಗಳಲ್ಲಿ ಹರಿದು ಹಂಚಿ ಹೋಗಿದ್ದರು. ಬ್ರಿಟಿಷರ ಆಡಳಿತ ಆರಂಭವಾದ ಮೇಲೆ ಪರಿಸ್ಥಿತಿ ಇನ್ನೂ ಹದಗೆಡುತ್ತಾ ಮುಂದುವರೆಯಿತು. 1799 ರಲ್ಲಿ ನಾಲ್ಕನೆಯ ಆಂಗ್ಲೋ–ಮೈಸೂರು ಯುದ್ಧದಲ್ಲಿ ಟಿಪ್ಪು ಹತನಾದ ನಂತರ ಕನ್ನಡ– ತೆಲುಗು ಮಾತನಾಡುವ ಪ್ರದೇಶಗಳು ಹೈದರಾಬಾದ್ ನಿಜಾಮನ ಆಡಳಿತಕ್ಕೂ, ದಕ್ಷಿಣ ಕನ್ನಡ ಜಿಲ್ಲೆ, ಕೊಯಮತ್ತೂರು ಮತ್ತು ವೈನಾಡು ಪ್ರಾಂತ್ಯಗಳ ಆಡಳಿತ ಬ್ರಿಟಿಷರ ಅಧೀನಕ್ಕೂ ನಂತರ ಬಿಜಾಪುರ, ಬೆಳಗಾವಿ ಮತ್ತು ಧಾರವಾಡ ಪ್ರಾಂತ್ಯಗಳು ಬ್ರಿಟಿಷರ ಅಧೀನಕ್ಕೆ ಒಳಪಟ್ಟು ಮುಂಬಯಿ ಪ್ರಾಂತ್ಯಕ್ಕೆ ಸೇರಿ ಮರಾಠಿ ಪ್ರಾಬಲ್ಯದ ಮುಂದೆ ಕನ್ನಡ ಅನಾಥವಾಗುವಂತಹ ಸ್ಥಿತಿ ನಿರ್ಮಾಣಗೊಂಡಿತು. ಅದೇ ತರಹ ಹೈದರಾಬಾದ್ ನಿಜಾಮನ ಪ್ರಾಂತ್ಯಕ್ಕೆ ಸೇರಿದ ರಾಯಚೂರು, ಗುಲ್ಬರ್ಗಾ ಮತ್ತು ಬೀದರಗಳಲ್ಲಿ ನೆಲದ ಮೂಲ ಭಾಷೆ ಗೌಣವಾಗುತ್ತಾ ಸಾಗಿತ್ತು. ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದ ಬಳ್ಳಾರಿ ಮತ್ತು ದಕ್ಷಿಣ ಕನ್ನಡದ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿರಲಿಲ್ಲ. ಕನ್ನಡ ಉನ್ನತ ಸ್ಥಿತಿಯಲ್ಲಿದ್ದದ್ದು ಮೈಸೂರು ಮತ್ತು ಕೊಡಗು ಸಂಸ್ಥಾನಗಳಲ್ಲಿ ಮಾತ್ರ.

**ಏಕೀಕರಣ ಹಿನ್ನಲೆ**

ಕನ್ನಡ ಮಾತನಾಡುವ ಪ್ರದೇಶಗಳು 20 ಘಟಕಗಳಲ್ಲಿ ಹರಿದು ಹಂಚಿ ಹೋಗಿದ್ದ ಕಾಲವು ಒಂದೆಡೆ ಸ್ವಾತಂತ್ರ್ಯ ಚಳುವಳಿ ತೀವ್ರಗೊಂಡ ಕಾಲವಾಗಿದ್ದು, ಅದೇ ಹೊತ್ತಿನಲ್ಲಿ ಕನ್ನಡಿಗರು ಒಂದೆಡೆ ಸ್ವಾತಂತ್ರ್ಯಕ್ಕಾಗಿ ಮತ್ತೊಂದೆಡೆ ಕರ್ನಾಟಕದ ಏಕೀಕರಣಕ್ಕಾಗಿ ಹೋರಾಟ ಆರಂಭಿಸಿದ್ದ ಕಾಲವಾಗಿತ್ತು. ಕನ್ನಡಿಗರು ಮರಾಠಿ, ಉರ್ದು, ತೆಲುಗು, ಮತ್ತು ತಮಿಳು ಭಾಷೆಗಳ ಯಜಮಾನಿಕೆ ಅಡಿಯಲ್ಲಿ ಬದುಕುತ್ತಾ ಪ್ರಗತಿದಾಯಕ ಕೆಲಸಗಳಿಂದಲೂ ವಂಚಿತರಾಗಿ ದುಸ್ಥಿತಿಯಲ್ಲಿ ಬದುಕುತ್ತಿದ್ದ ಕನ್ನಡಿಗರ ಸ್ಥಿತಿ ಅನಾಥ ಮತ್ತು ಅರಕ್ಷಿತ ಸ್ಥಿತಿಯಾಗಿತ್ತು. 1826 ರಲ್ಲಿ ಸರ್ಕಾರವೇ ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಮರಾಠಿ ಶಾಲೆಗಳನ್ನು ಆರಂಭಿಸಿತು. ಇದೇ ಸಮಯದಲ್ಲಿ ಸರ್ ವಾಲ್ಟರ್ ಎಲಿಯಟ್ ಎಂಬ ಅಧಿಕಾರಿ ಈ ಪ್ರದೇಶದ ಹೆಚ್ಚು ಜನರ ಸಂಪರ್ಕ ಭಾಷೆಯಾದ ಕನ್ನಡ ಶಾಲೆಯನ್ನು ಆರಂಭಿಸಿ ಕನ್ನಡ ಕೈಂಕರ್ಯಕ್ಕೆ ನಾಂದಿ ಹಾಡಿದನು. ಮುಂದೆ ಕನ್ನಡ ಕಲಿಸುವ ಕೆಲಸವನ್ನು ಡೆಪ್ಯೂಟಿ ಚೆನ್ನಬಸಪ್ಪನವರು ಶ್ರದ್ಧೆಯಿಂದ ಪಾಲಿಸಿದರು.

**ಏಕೀಕರಣಕ್ಕಾಗಿ ದೊರೆತ ಪ್ರೇರಣೆ**

ಬ್ರಿಟಿಷರು ತಮ್ಮ ಆಡಳಿತದ ಅನುಕೂಲಕ್ಕೆ ಅನುಗುಣವಾಗಿ ರಾಜ್ಯಗಳನ್ನು ವಿಭಜಿಸುತ್ತಾ ಭಾಷೆಯ ಅಸ್ಮಿತೆಯನ್ನು ಕಡೆಗಣಿಸಿದ್ದಾಗ ಲೋಕಮಾನ್ಯ ತಿಲಕರು ಭಾಷಿಕ ಮತ್ತು ಐತಿಹಾಸಿಕ ಅಂಶಗಳ ಆಧಾರದ ಮೇಲೆ ಪ್ರಾಂತ್ಯಗಳ ವಿಭಜನೆ ಆಗಬೇಕು ಎಂದು ಪ್ರತಿಪಾದಿಸಿದರು. ಮುಂದೆ ಕನ್ನಡ ಸಾಹಿತ್ಯ, ಸಂಸ್ಕೃತಿ, ಭಾಷೆ, ಪರಂಪರೆಯನ್ನು ಕಾಯಲು ಅನೇಕ ಕನ್ನಡಿಗರು ಮುಂದೆ ಬಂದರು. ಅದರಲ್ಲಿಯೂ ಡೆಪ್ಯೂಟಿ ಚೆನ್ನಬಸಪ್ಪನವರ ಅವಿರತ ಪ್ರಯತ್ನ, ಸರ್ ಥಾಮಸ್ ಮನ್ರೋ, ಸರ್ ವಾಲ್ಟರ್ ಎಲಿಯಟ್, ಡಬ್ಲ್ಯೂ. ಎ. ಸರಲ್, ಜಾನ್. ಡನಲಪ್. ಜೆ.ಎಫ್. ಫ್ಲೀಟ್ ಮುಂತಾದ ಬ್ರಿಟಿಷ್ ಅಧಿಕಾರಿಗಳ ಒತ್ತಾಸೆಯೊಂದಿಗೆ 1919 ಮಾಂಟೆಗೋ– ಚೆಮ್ಸ್‌ಫೋರ್ಡ್ ಸುಧಾರಣೆಗಳಲ್ಲಿ ಭಾಷಾವಾರು ಪ್ರಾಂತ್ಯಗಳ ರಚನೆಗೆ ಶಿಫಾರಸ್ಸು ಮಾಡಿದ್ದು, 1928 ರ ನೆಹರೂ ವರದಿ ಭಾಷಾವಾರು ಪ್ರಾಂತ್ಯಗಳ ರಚನೆಯನ್ನು

ಬಲವಾಗಿ ಪ್ರತಿಪಾದಿಸಿದ್ದು, ಕನ್ನಡದ ಕಾಲಾಳುಗಳ ಹೋರಾಟ, ಅದರಲ್ಲಿಯೂ ಮುಖ್ಯವಾಗಿ ಮುಂಬೈ ಕರ್ನಾಟಕದ ನಾಯಕರು, ಸಂಘಸಂಸ್ಥೆಗಳು ಮತ್ತು ಪತ್ರಿಕೆಗಳ ಪಾತ್ರ ಗುರುತರವಾದುದು.

**ಏಕೀಕರಣ ಚಳುವಳಿಗೆ ಪ್ರೇರಣೆ ಒದಗಿಸಿದ ಕೃತಿಗಳು ಮತ್ತು ಕವನಗಳು**

ಒಂದೇ ರೀತಿಯ ಐತಿಹಾಸಿಕ ಹಿನ್ನಲೆ, ಸಂಸ್ಕೃತಿ, ಒಂದೇ ಭಾಷೆಯನ್ನಾಡುವ ಜನತೆ ಏಕ ಆಡಳಿತದ ಘಟಕವನ್ನು ಹೊಂದಿ ಒಂದಾಗಿರಲು ಬಯಸಿ ಆರಂಭಿಸಿದ ಚಳುವಳಿಯೇ ಏಕೀಕರಣ ಚಳುವಳಿಯಾಗಿದ್ದು, ಈ ಮಹಾನ್ ಕಾರ್ಯದಲ್ಲಿ ಬಿ.ಎಲ್ ರೈಸ್ ಅವರು ಬರೆದ "ಎಪಿಗ್ರಫಿಯಾ ಕರ್ನಾಟಕ" ಎಂಬ ಕೃತಿಯು ಕನ್ನಡ ನಾಡಿನ ಐತಿಹಾಸಿಕ ಹಿನ್ನಲೆಯನ್ನು ತಿಳಿಸುತ್ತಾ ಕನ್ನಡಿಗರಲ್ಲಿ ತಮ್ಮ ಭವ್ಯ ಪರಂಪರೆ, ಭೌಗೋಳಿಕತೆ ಮುಂತಾದ ಅಂಶಗಳನ್ನು ತಿಳಿಸಿಕೊಟ್ಟಿತು. ಕರ್ನಾಟಕ ಇತಿಹಾಸವನ್ನು ಬರೆದ ಮಾರ್ಕ್ ವಿಲ್ಕ್ಸ್, ಹೊಯ್ಸಳ ಚರಿತ್ರೆಯನ್ನು ಬರೆದ ಕರ್ನಲ್ ಮೆಕೆಂಜಿ ಕನ್ನಡಿಗರ ಇತಿಹಾಸವನ್ನು ತಿಳಿಸುತ್ತಾ ಐಕ್ಯತೆಯ ಅಗತ್ಯತೆಯನ್ನು ಪ್ರತಿಪಾದಿಸಿದರು. ಕನ್ನಡದ ಕುಲಪುರೋಹಿತರೆಂದು ಪ್ರಸಿದ್ಧರಾದ ಆಲೂರು ವೆಂಕಟರಾಯರು ಐಹೊಳೆ, ಪಟ್ಟದಕಲ್ಲು, ಬನವಾಸಿ, ಹಂಪೆ ಮುಂತಾದ ಪ್ರಾಚೀನ ರಾಜಮನೆತನಗಳ ಕೇಂದ್ರಗಳಲ್ಲಿ ಸಂಶೋಧನೆ ನಡೆಸಿ ಕರ್ನಾಟಕ ಗತವೈಭವ ಎಂಬ ಕೃತಿಯ ಮೂಲಕ ಕನ್ನಡಿಗರಲ್ಲಿ ಏಕೀಕರಣದ ಬೆಳಕು ಮೂಡುವಂತೆ, ನಾಡಿನ ಏಕೀಕರಣದ ಅನಿವಾರ್ಯತೆಯ ಬಗ್ಗೆ ಜಾಗೃತಿ ಮೂಡಿಸಿದರು. ಅದೇ ರೀತಿಯಾಗಿ ಹುಯಿಲಗೋಳ ನಾರಾಯಣರಾಯರು ಬರೆದ ಉದಯವಾಗಲಿ ನಮ್ಮ ಕನ್ನಡ ಚೆಲುವ ಕನ್ನಡನಾಡು, ಶಾಂತಕವಿಗಳು ಬರೆದ ರಕ್ಷಿಸು ಕರ್ನಾಟಕ ದೇವಿ, ಎಂ. ಗೋವಿಂದ ಪೈ ಅವರು ಬರೆದ ತಾಯೆ ಬಾರೆ ಕನ್ನಡಿಗರ ಮಾತೆಯೆ, ಬಿ.ಎಂ.ಶ್ರೀ ಅವರು ಬರೆದ ಹಾರಿಸಿ, ಹಾರಿಸಿ ಕನ್ನಡ ಬಾವುಟ, ಕುವೆಂಪು ಅವರ ಜೈ ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ ಮುಂತಾದವು ಶತಮಾನಗಳಿಂದ ಜಡ್ಡುಗಟ್ಟಿದ ಸ್ಥಿತಿಯಲ್ಲಿದ್ದ ಕನ್ನಡಿಗರ ಭಾಷಾ ಪ್ರೇಮ ಮತ್ತು ನಾಡ ಪ್ರೇಮಗಳನ್ನು ಎಚ್ಚರಗೊಳಿಸಿದವು. ಹೀಗೆ ಸಾಹಿತ್ಯದ ಮೂಲಕ ಕರ್ನಾಟಕದ ಏಕೀಕರಣಕ್ಕೆ ಆಸ್ತಿಭಾರ ಹಾಕಿದ ಇತರ ಪ್ರಮುಖರೆಂದರೆ ಮುದವೀಡು ಕೃಷ್ಣರಾಯರು, ಬೆನಗಲ್ ರಾಮರಾವ್, ಕಡಪಾ ರಾಘವೇಂದ್ರ ರಾವ್, ಗದಿಗೆಯ್ಯ ಹೊನ್ನಾಪುರ ಮಠ, ಆರ್. ನರಸಿಂಹಾಚಾರ್, ದ.ರಾ. ಬೇಂದ್ರೆ, ಶಂಭಾ ಜೋಶಿ, ಅ.ನ. ಕೃಷ್ಣರಾವ್, ವಿ.ಕೃ. ಗೋಕಾಕ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಆರ್.ಆರ್. ದಿವಾಕರ ಮುಂತಾದವರು ಕರ್ನಾಟಕದ ಏಕೀಕರಣದ ಜಾಗೃತಿಯನ್ನು ತಮ್ಮ ಬರವಣಿಗೆಗಳ ಮೂಲಕ ರೂಪಿಸಿದರು.

**ಏಕೀಕರಣ ಚಳುವಳಿಯ ನಾಯಕರುಗಳು**

1. ಡೆಪ್ಯೂಟಿ ಚೆನ್ನಬಸಪ್ಪ: ಕರ್ನಾಟಕದ ಏಕೀಕರಣಕ್ಕೆ ನಾಂದಿ ಹಾಡಿದ ಚನ್ನಬಸಪ್ಪ ಅವರು 1 ನವೆಂಬರ್ 1833 ರಲ್ಲಿ ಬೆಳಗಾವಿ ಜಿಲ್ಲೆಯ ಗೋಕಾಕನಲ್ಲಿ ಜನಿಸಿದರು. ಕನ್ನಡದ ಐತಿಹಾಸಿಕ ಹಿನ್ನಲೆ, ಶ್ರೇಷ್ಠತೆಯ ಬಗ್ಗೆ ಅಪಾರ ಹೆಮ್ಮೆಯನ್ನು ಹೊಂದಿದ್ದ ಇವರು ಶಿಕ್ಷಣ ಇಲಾಖೆಯಲ್ಲಿ ಇನ್ಸ್‌ಪೆಕ್ಟರ್ ಆಗಿ ಕಾರ್ಯನಿರ್ವಹಿಸುತ್ತಾ, ಜೀವನ ಶಿಕ್ಷಣ ಎಂಬ ಮಾಸಿಕ ಪತ್ರಿಕೆಯ ಸಂಪಾದಕರಾಗಿ, ಶಾಲಾ ಶಿಕ್ಷಣದಲ್ಲಿ ಕನ್ನಡ ಮಾಧ್ಯಮವನ್ನು ಕಡ್ಡಾಯಗೊಳಿಸುವುದರೊಂದಿಗೆ ಕನ್ನಡ ಪ್ರಾಥಮಿಕ ಶಾಲೆಗಳನ್ನು ಆರಂಭಿಸಿದರು. ಅದರೊಂದಿಗೆ ಶಿಕ್ಷಕರ ತರಬೇತಿ ಶಾಲೆಗಳಲ್ಲಿ ಕನ್ನಡ ಮಾಧ್ಯಮವನ್ನು ಕಡ್ಡಾಯಗೊಳಿಸಿ

ಕನ್ನಡ ಕಟ್ಟುವ ಕಾರ್ಯವನ್ನು ಮಾಡಿದರು.

2. ಆಲೂರು ವೆಂಕಟರಾಯರು: ಕರ್ನಾಟಕದ ಕುಲಪುರೋಹಿತರೆಂದು ಖ್ಯಾತರಾದ ಆಲೂರು ವೆಂಕಟರಾಯರು 12 ಜುಲೈ 1880 ರಲ್ಲಿ ಬಿಜಾಪುರದಲ್ಲಿ ಜನಿಸಿದರು. ಇತಿಹಾಸಕಾರರು, ಪತ್ರಕರ್ತರು ಮತ್ತು ಬರಹಗಾರರಾಗಿದ್ದ ಇವರು ಜಯ ಕರ್ನಾಟಕ ಎಂಬ ಪತ್ರಿಕೆಯನ್ನು ಆರಂಭಿಸಿ ಅದರ ಏಕೈಕ ಗುರಿ ಕರ್ನಾಟಕದ ಏಕೀಕರಣವಾಗಿಸಿದ್ದರು. ತಮ್ಮ ಕರ್ನಾಟಕ ಗತವೈಭವ ಎಂಬ ಕೃತಿಯಲ್ಲಿ ಹೀಗೆ ಬರೆಯುತ್ತಾರೆ, "ನಾನು ಕನ್ನಡಿಗನು, ಕರ್ನಾಟಕವು ನನ್ನದು ಎಂಬ ಸದ್ವಿಚಾರ ಯಾವನ ಹೃದಯದಲ್ಲಿ ಆತ್ಮಾನಂದದಿಂದ ಪುಳಕಿತಗೊಳ್ಳುವುದಿಲ್ಲವೋ ಕನ್ನಡ ತಾಯಿಗೆ ಈಗ ಬಂದೊದಗಿರುವ ವಿಷಮ ಸ್ಥಿತಿಯಲ್ಲಿ ಯಾವಾತನ ಹೃದಯವು ತಲ್ಲಣಿಸುವುದಿಲ್ಲವೋ ಅದು ಹೃದಯವಲ್ಲ, ಕಲ್ಲಿನ ಬಂಡೆ, ದೇಹವಲ್ಲ ಮೋಟು ಮರ" ಎಂದು ಹೇಳುತ್ತಾ ಕನ್ನಡಿಗರಲ್ಲಿ ಆತ್ಮಾಭಿಮಾನವನ್ನು ಮೂಡಿಸುತ್ತಾ, ಏಕೀಕರಣಕ್ಕಾಗಿ ಹೋರಾಡುವಂತೆ ಪ್ರೇರೇಪಿಸಿದರು. ಜಯ ಕರ್ನಾಟಕ ಎಂಬ ಪತ್ರಿಕೆಯನ್ನು 1922 ರಲ್ಲಿ ಆರಂಭಿಸಿ ಕನ್ನಡ ನಾಡಿನ ಕುರಿತು ಬರೆಯುವ ಲೇಖನಗಳಿಗೆ ಪ್ರೋತ್ಸಾಹ ನೀಡಿದರು. ಕರ್ನಾಟಕ ಪತ್ರ, ರಾಜಹಂಸ, ಕರ್ನಾಟಕ ವೃತ್ತ ಮುಂತಾದ ಪತ್ರಿಕೆಗಳಿಗೆ ಲೇಖನಗಳನ್ನು ಬರೆದ ಆಲೂರರು ವಾಗ್ಭೂಷಣ ಎಂಬ ಮಾಸ ಪತ್ರಿಕೆಯ ಸಂಪಾದಕರಾಗಿ ಕಾರ್ಯನಿರ್ವಹಿಸಿದರು. ಅವರು 27 ಪುಸ್ತಕಗಳನ್ನು ಬರೆದಿದ್ದು ಅವುಗಳಲ್ಲಿ ವಿದ್ಯಾರಣ್ಯ ಚರಿತ್ರೆ, ಕರ್ನಾಟಕ ಗತ ವೈಭವ, ಕರ್ನಾಟಕ ವೀರ ರತ್ನಗಳು, ಕರ್ನಾಟಕತ್ವ ಮುಂತಾದವುಗಳು ಪ್ರಮುಖವಾಗಿದ್ದು ಅವರ ಎಲ್ಲ ಬರವಣಿಗೆಗಳು ಕರ್ನಾಟಕ ಏಕೀಕರಣದ ದಿವ್ಯ ಮಂತ್ರವನ್ನು ಸಾರುವ ಏಕ ಉದ್ದೇಶ ಹೊಂದಿದವುಗಳಾಗಿರುವುದರಿಂದಲೇ ವರಕವಿ ಬೇಂದ್ರೆಯವರು ಆಲೂರರನ್ನು ಕರ್ನಾಟಕದ ಪ್ರಾಣೋಪಾಸಕರು ಎಂದು ಕರೆದಿದ್ದಾರೆ.

3. ಅದರಗುಂಚಿ ಶಂಕರ ಗೌಡರು: ಕರ್ನಾಟಕದ ಏಕೀಕರಣಕ್ಕಾಗಿ 28 ಮಾರ್ಚ್ 1953 ರಿಂದ 19 ಏಪ್ರಿಲ್ 1953 ರ ವರೆಗೂ ಉಪವಾಸ ಸತ್ಯಾಗ್ರಹದ ಮೂಲಕ ಕರ್ನಾಟಕದ ಏಕೀಕರಣಕ್ಕಾಗಿ ಹೋರಾಟ ಮಾಡಿದ ಅದರಗುಂಚಿ ಶಂಕರ ಗೌಡರು ಕೇಂದ್ರ ಸರ್ಕಾರ ಆಂಧ್ರಪ್ರದೇಶ ರಾಜ್ಯ ರಚನೆಯ ನಂತರ ಉಳಿದ ಪ್ರಾಂತ್ಯಗಳಲ್ಲಿ ಭಾಷಾವಾರು ರಾಜ್ಯಗಳ ರಚನೆಗೆ ತೋರುತ್ತಿದ್ದ ನಿರಾಸಕ್ತಿಯನ್ನು ವಿರೋಧಿಸಿ ಕನ್ನಡಿಗರ ಅಸ್ಮಿತೆಯನ್ನು ಕಾಪಾಡುವ ಸಲುವಾಗಿ ಹೋರಾಡಿದ ನಾಯಕರಾಗಿದ್ದು, ಆ ಮೂಲಕ ಕರ್ನಾಟಕದ ಏಕೀಕರಣಕ್ಕಾಗಿ ದುಡಿದ ಮಹನೀಯರಲ್ಲಿ ಮೊದಲನೆಯ ಸಾಲಿನ ನಾಯಕರಾಗಿದ್ದಾರೆ.

4. ಸಿದ್ದಪ್ಪ ಕಂಬಳಿ: 1882 ರಲ್ಲಿ ಹುಬ್ಬಳ್ಳಿಯಲ್ಲಿ ಜನಿಸಿದ ಸಿದ್ದಪ್ಪ ಕಂಬಳಿಯವರು ಮುಂಬಯಿ ಪ್ರಾಂತ್ಯಕ್ಕೆ ಸೇರಿದ್ದ ಧಾರವಾಡ ಉತ್ತರ ಕ್ಷೇತ್ರದ ಶಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಇವರು ಬೆಳಗಾವಿ, ಬಿಜಾಪುರ ಮತ್ತು ಧಾರವಾಡ ಪ್ರಾಂತ್ಯಗಳನ್ನು ಮುಂಬಯಿ ಪ್ರಾಂತ್ಯದಿಂದ ಬಿಡುಗಡೆಗೊಳಿಸಿ ಏಕೀಕೃತ ಕರ್ನಾಟಕಕ್ಕೆ ಸೇರಿಸಲು ಹಗಲಿರುಳು ಶ್ರಮಿಸಿದರು.

5. ಅಂದಾನಪ್ಪ ದೊಡ್ಡಮೇಟಿ: 16 ಮಾರ್ಚ್ 1908 ರಲ್ಲಿ ಗದಗ ಜಿಲ್ಲೆಯ ಜಕ್ಕಲಿ ಗ್ರಾಮದಲ್ಲಿ ಜನಿಸಿದ ಅಂದಾನಪ್ಪ ದೊಡ್ಡಮೇಟಿ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುತ್ತಾ ಕರ್ನಾಟಕದ ಏಕೀಕರಣಕ್ಕೆ ಹೋರಾಡಿದ ಧೀಮಂತರಾಗಿದ್ದು, 1937 ರಲ್ಲಿ ಧಾರವಾಡ

ಉತ್ತರ ಕ್ಷೇತ್ರದಿಂದ ಬಾಂಬೆ ವಿಧಾನಸಭೆಗೆ ಆಯ್ಕೆಯಾದರು. ಇವರು 1938 ರಲ್ಲಿ ಕರ್ನಾಟಕ ಪ್ರಾಂತ್ಯ ರಚನೆಗೆ ಒತ್ತಾಯವನ್ನು ಮಾಡುತ್ತಾ, ಶಾಸಕಾಂಗದಲ್ಲಿ ಕನ್ನಡದಲ್ಲಿ ಮಾತನಾಡಿ ಕರ್ನಾಟಕದ ಏಕೀಕರಣದ ಒತ್ತಾಯವನ್ನು ಮಂಡಿಸಿದರು. ಮುಂದೆ ಕರ್ನಾಟಕ ಏಕೀಕರಣ ಚಳುವಳಿಗೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು.

6. ಪಾಟೀಲ ಪುಟ್ಟಪ್ಪ: ಕರ್ನಾಟಕ ಏಕೀಕರಣದ ರೂವಾರಿಗಳಲ್ಲಿ ಒಬ್ಬರಾದ ಪಾಟೀಲ ಪುಟ್ಟಪ್ಪನವರು ಅನೇಕ ಲೇಖನಗಳ ಮೂಲಕ ಕರ್ನಾಟಕ ಏಕೀಕರಣದ ಪ್ರಾಮುಖ್ಯತೆಯನ್ನು ಬಡಿದೆಚ್ಚರಿಸಿದರು. 1949 ರಲ್ಲಿ ಕಲಬುರಗಿಯ ಕರ್ನಾಟಕ ಏಕೀಕರಣ ಪರಿಷತ್ತಿನ ಗೊತ್ತುವಳಿಯಲ್ಲಿ ಮೈಸೂರು ಸಹಿತ ಕರ್ನಾಟಕವಾಗಬೇಕು ಎಂಬ ಗೊತ್ತುವಳಿಯನ್ನು ಮಂಡಿಸಿದರು. ಇದು ಮುಂದೆ ವಿಶಾಲ ಕರ್ನಾಟಕದ ಪರಿಕಲ್ಪನೆಗೆ ದಾರಿಯಾಯಿತು.

ಕರ್ನಾಟಕದ ಏಕೀಕರಣಕ್ಕಾಗಿ ಅಹರ್ನಿಶಿ ದುಡಿದ ಮಹನೀಯರಲ್ಲಿ ಎಸ್. ನಿಜಲಿಂಗಪ್ಪ, ಕೆಂಗಲ್ ಹನುಮಂತಯ್ಯ, ಆರ್.ಆರ್. ದಿವಾಕರ, ಎನ್.ಎಸ್. ಹರ್ಡೀಕರ, ಜಯದೇವಿ ತಾಯಿ ಲಿಗಾಡೆ, ಗೊರೂರು ರಾಮಸ್ವಾಮಿ ಅಯ್ಯಂಗಾರ, ಬೆನಗಲ್ ರಾಮರಾವ್ ಮುಂತಾದ ಅನೇಕ ಮಹನೀಯರು ಕರ್ನಾಟಕದ ಏಕೀಕರಣಕ್ಕೆ ಕಾರಣಕರ್ತರಾಗಿದ್ದು ಅವರಲ್ಲಿ ಮುಂಬೈ ಕರ್ನಾಟಕದ ಮಹನೀಯರ ಕೊಡುಗೆ ಪ್ರಮುಖವಾಗಿದೆ.

**ಏಕೀಕರಣ ಚಳುವಳಿಯ ರೂವಾರಿಗಳಾದ ಸಂಘ–ಸಂಸ್ಥೆಗಳು**

**ಕರ್ನಾಟಕದ ಏಕೀಕರಣಕ್ಕಾಗಿ ಶ್ರಮಿಸಿದ ಪ್ರಮುಖ ಸಂಘ–ಸಂಸ್ಥೆಗಳಲ್ಲಿ ಅತಿ ಪ್ರಮುಖವಾದವುಗಳು:**

1. ಕರ್ನಾಟಕ ವಿದ್ಯಾವರ್ಧಕ ಸಂಘ: 30 ಜುಲೈ 1890 ರಂದು ಧಾರವಾಡದಲ್ಲಿ ಆರಂಭವಾದ ಕರ್ನಾಟಕ ವಿದ್ಯಾವರ್ಧಕ ಸಂಘವು ಕನ್ನಡ ಸಾಹಿತ್ಯದ ಪೋಷಣೆ, ಸಂಸ್ಕೃತಿ, ಭಾಷೆ ಮತ್ತು ಕನ್ನಡಿಗರ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತಾ, ಕನ್ನಡ ಭಾಷಿಕರನ್ನು ಒಂದಾಗಿಸಲು ರಾ.ಹ. ದೇಶಪಾಂಡೆ ಅವರ ಪರಿಶ್ರಮದ ಫಲವಾಗಿ ರೂಪಿತವಾದ ಸಂಸ್ಥೆಯಾಗಿತ್ತು. ಈ ಸಂಸ್ಥೆ ಪ್ರಾಚೀನ ಕನ್ನಡ ಕೃತಿಗಳ ಪ್ರಕಟಣೆ, ಬೇರೆ ಭಾಷೆಗಳ ಉಪಯುಕ್ತ ಕೃತಿಗಳನ್ನು ಕನ್ನಡ ಭಾಷೆಗೆ ಅನುವಾದಿಸುವುದು, ಹೊಸ ಗ್ರಂಥ ಭಂಡಾರಗಳ ಸ್ಥಾಪನೆ, ಹೊಸ ಪತ್ರಿಕೆಗಳ ಪ್ರಕಟಣೆ ಮತ್ತು ಪ್ರಸ್ತುತ ಇರುವ ಪತ್ರಿಕೆಗಳ ಪ್ರಕಟಣೆಗೆ ಸಹಾಯ ಮಾಡುವುದು ಮುಂತಾದ ಕಾರ್ಯಗಳ ಮೂಲಕ ನಾಡಿನ ತುಂಬಾ ಹಲವು ಲೇಖಕರನ್ನು ಬೆಳೆಸಿತು. ಹಲವು ಗ್ರಂಥಗಳ ಪ್ರಕಟಣೆಯೊಂದಿಗೆ ವಾಗ್ಭೂಷಣ ಮತ್ತು ಬೆನಗಲ್ ಶಾಮರಾಯರ ಸಂಪಾದಕತ್ವದಲ್ಲಿ ಸುಹಾಸಿನಿ ಎಂಬ ಮಾಸ ಪತ್ರಿಕೆಗಳನ್ನು ಹೊರಡಿಸಿತು. 1907 ರ ಜೂನ್ ತಿಂಗಳು ಅಖಿಲ ಕರ್ನಾಟಕ ಮಟ್ಟದ ಗ್ರಂಥಕರ್ತರ ಸಮ್ಮೇಳನವನ್ನು ನಡೆಸಿತು. ಹೀಗೆ ಕನ್ನಡದ ಕೈಂಕರ್ಯವನ್ನು ಪಾಲಿಸುತ್ತಾ ಸಾಹಿತ್ಯಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಕನ್ನಡಿಗರಲ್ಲಿ ಏಕತೆಯನ್ನು ಮೂಡಿಸುವಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಅನನ್ಯ ಸೇವೆಯನ್ನು ಸಲ್ಲಿಸಿದೆ.

2. ಕನ್ನಡ ಸಾಹಿತ್ಯ ಪರಿಷತ್ತು: ಮೈಸೂರಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪೋಷಕತ್ವ ಮತ್ತು ಸರ್. ಎಂ. ವಿಶ್ವೇಶ್ವರಯ್ಯನವರ ದೂರದೃಷ್ಟಿಯ ಫಲವಾಗಿ 1915 ರಲ್ಲಿ ಬೆಂಗಳೂರಿನಲ್ಲಿ ಆರಂಭವಾದ ಕನ್ನಡ ಸಾಹಿತ್ಯ ಪರಿಷತ್ತು ಮೈಸೂರು ಸಂಸ್ಥಾನದ ಪ್ರತಿನಿಧಿಗಳಲ್ಲದೆ ಕೊಡಗು, ಮುಂಬೈ ಕರ್ನಾಟಕ, ಮದ್ರಾಸ್

ಪ್ರಾಂತ್ಯ ಮತ್ತು ಹೈದರಾಬಾದ್ ಕರ್ನಾಟಕ ಪ್ರಾಂತ್ಯದ ಕನ್ನಡ ಪ್ರದೇಶಗಳ ಪ್ರತಿನಿಧಿಗಳನ್ನು ಹೊಂದಿದ್ದ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಪ್ರಥಮ ಸಾಹಿತ್ಯ ಸಮ್ಮೇಳನದಲ್ಲಿ ಏಕೀಕರಣದ ಪರವಾಗಿ ನಿರ್ಣಯ ಅಂಗೀಕರಿಸಿತು. ಕನ್ನಡ ನುಡಿ ಮತ್ತು ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಗಳಲ್ಲಿ ಏಕೀಕರಣದ ಪರವಾದ ಲೇಖನಗಳನ್ನು ಪ್ರಕಟಿಸುವುದರ ಮೂಲಕ ಏಕೀಕರಣಕ್ಕೆ ಉತ್ತೇಜನ ನೀಡಿತು. ಆಲೂರು ವೆಂಕಟರಾಯರು, ಮುದವೀಡು ಕೃಷ್ಣರಾಯರು, ಬೆನಗಲ್ ರಾಮರಾಯರು, ಎಚ್.ವಿ. ನಂಜುಂಡಯ್ಯ ಮುಂತಾದವರು ಕನ್ನಡ ಸಾಹಿತ್ಯ ಪರಿಷತ್ತನ್ನು ಬೆಳೆಸಿದ ಪ್ರಮುಖರು. ಪ್ರತಿ ವರ್ಷ ಒಂದೊಂದು ಸ್ಥಳದಲ್ಲಿ ಸಾಹಿತ್ಯ ಸಮ್ಮೇಳನಗಳನ್ನು ಸಂಘಟಿಸಿ ಕನ್ನಡ ಸಾಹಿತ್ಯ, ಸಂಸ್ಕೃತಿಗಳನ್ನು ಉತ್ತೇಜಿಸುವ ಕಾರ್ಯವನ್ನು ಕನ್ನಡ ಸಾಹಿತ್ಯ ಪರಿಷತ್ತು ನಿರ್ವಹಿಸುತ್ತಿದೆ.

3. ಕರ್ನಾಟಕ ಸಭೆ: 1916 ರಲ್ಲಿ ಕರ್ನಾಟಕ ಏಕೀಕರಣವನ್ನೇ ಪ್ರಧಾನ ಗುರಿಯನ್ನಾಗಿ ಹೊಂದಿದ ಕರ್ನಾಟಕ ಸಭೆಯನ್ನು ಆಲೂರು ವೆಂಕಟರಾಯರು, ವೆಂಕಟರಂಗೋಕಟ್ಟಿ, ಕಡಪಾ ರಾಘವೇಂದ್ರರಾವ್, ಮುದವೀಡು ಕೃಷ್ಣರಾಯರು, ಗದಿಗೆಯ್ಯ ಹೊನ್ನಾಪುರ ಮಠ, ಬಿಂದುರಾವ್ ಮುತಾಲಿಕ ದೇಸಾಯಿ, ಪಾಟೀಲ ಸಂಗಪ್ಪ ಮುಂತಾದ ಹಿರಿಯರು ಸ್ಥಾಪಿಸಿದರು. ಈ ಸಂಸ್ಥೆಯ ಮೂಲಕ ಕರ್ನಾಟಕದ ಏಕೀಕರಣಕ್ಕಾಗಿ ಅವಿರತವಾಗಿ ಶ್ರಮಿಸಲಾಯಿತು. ಕರ್ನಾಟಕ ಸಭೆಯ ಸದಸ್ಯರು ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನಗಳಲ್ಲಿ ಭಾಗವಹಿಸುತ್ತಾ, ಕರ್ನಾಟಕದ ಏಕೀಕರಣದ ಧ್ವನಿ ಅಖಿಲ ಭಾರತದ ಮಟ್ಟದಲ್ಲಿ ಪ್ರಚಲಿತವಾಗಿರುವಂತೆ ನೋಡಿಕೊಳ್ಳುತ್ತಾ, ಕನ್ನಡಿಗರನ್ನು ಒಗ್ಗೂಡಿಸಿ ರಾಜ್ಯ ರಚನೆಯ ನಿಟ್ಟಿನಲ್ಲಿ ಶ್ಲಾಘನೀಯ ಕಾರ್ಯ ನಿರ್ವಹಿಸಿದರು.

4. ಕರ್ನಾಟಕ ರಾಜಕೀಯ ಪರಿಷತ್ತು: 1918 ರಲ್ಲಿ ಕರ್ನಾಟಕ ಏಕೀಕರಣಕ್ಕೆ ರಾಜಕೀಯ ಬೆಂಬಲವನ್ನು ಪಡೆಯಲು ಕರ್ನಾಟಕ ರಾಜಕೀಯ ಪರಿಷತ್ತನ್ನು ಸ್ಥಾಪಿಸಲಾಯಿತು. ಇದರ ಮೊದಲ ಅಧಿವೇಶನ ಧಾರವಾಡದ ಉಳವಿ ಚನ್ನಬಸಪ್ಪನ ಗುಡ್ಡದ ಮೇಲೆ ಮೈಸೂರಿನ ನಿವೃತ್ತ ದಿವಾನರಾದ ವಿ.ಪಿ. ಮಾಧವರಾವ್ ಅವರ ಅಧ್ಯಕ್ಷತೆಯಲ್ಲಿ 1920 ರಲ್ಲಿ ನಡೆಯಿತು. ಈ ಸಂಸ್ಥೆಯ ಮೂಲಕ ಕಾಂಗ್ರೆಸ್ ಮೇಲೆ ಒತ್ತಡ ಹೇರಿ ಕನ್ನಡ ಮಾತನಾಡುವ ಪ್ರದೇಶಗಳನ್ನೆಲ್ಲ ಸೇರಿಸಿ ಒಂದು ಸ್ವತಂತ್ರ ಪ್ರಾಂತ್ಯ ರಚನೆಗೆ ಒತ್ತಡ ತರಲಾಯಿತು. ಕಡಪಾ ರಾಘವೇಂದ್ರ ರಾಯರ ನೇತೃತ್ವದಲ್ಲಿ 800 ಜನ ಕನ್ನಡಿಗರು ನಾಗಪುರದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ ಪರಿಣಾಮವಾಗಿ 1924 ರಲ್ಲಿ ಮುಂಬೈ ಕರ್ನಾಟಕ ಕಾಂಗ್ರೆಸ್ ಸಮಿತಿ ರೂಪಿತವಾಯಿತು. ಮೈಸೂರು ಸಂಸ್ಥಾನದ ಪ್ರದೇಶಗಳನ್ನು ಹೊರತುಪಡಿಸಿ ಉಳಿದ ಬಹುತೇಕ ಕನ್ನಡದ ಪ್ರದೇಶಗಳು ಮುಂಬೈ ಕರ್ನಾಟಕ ಕಾಂಗ್ರೆಸ್ ಸಮಿತಿಯ ವ್ಯಾಪ್ತಿಗೆ ಬಂದವು.

5. ಕರ್ನಾಟಕ ಏಕೀಕರಣ ಸಭೆ: ಕರ್ನಾಟಕದ ಏಕೀಕರಣವನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡು 1924 ರ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲಿಯೇ 25 ಡಿಸೆಂಬರ್ 1924 ರಂದು ಸಿದ್ದಪ್ಪ ಕಂಬಳಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಏಕೀಕರಣ ಸಭೆ ಸ್ಥಾಪಿತವಾಯಿತು. ಈ ಸಂಘಟನೆಯ ಹತ್ತನೆಯ ಪರಿಷತ್ತನ್ನು ಉದ್ಘಾಟಿಸಿದ ಸರ್ದಾರ್ ವಲ್ಲಭ ಭಾಯಿ ಪಟೇಲರು ಭಾಷಾವಾರು ಪ್ರಾಂತ್ಯಗಳ ರಚನೆಯ ಅಗತ್ಯತೆಯನ್ನು ಹೇಳುತ್ತಾ, ಕರ್ನಾಟಕ ಪ್ರಾಂತ್ಯ ರಚನೆಯು ಶೀಘ್ರ ಆಗುವುದೆಂದು ಭರವಸೆ ನೀಡಿದರು. ಮುಂದೆ ಕರ್ನಾಟಕ ಏಕೀಕರಣ ಸಂಘವಾಗಿ ಮಾರ್ಪಟ್ಟ ಈ ಸಂಸ್ಥೆಯ ಸಂಚಾಲಕರಾಗಿ ಆಲೂರು ವೆಂಕಟರಾಯರು

ಮತ್ತು ಸಿದ್ದಪ್ಪ ಕಂಬಳಿಯವರು ದುಡಿದರು.

**ಏಕೀಕರಣದಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ ಪತ್ರಿಕೆಗಳು**

ಕನ್ನಡಿಗರಲ್ಲಿ ನಾಡಿನ ಪ್ರಾಚೀನ ಹಿರಿಮೆಯನ್ನು ತಿಳಿಸುವುದರೊಂದಿಗೆ ಭಾವನಾತ್ಮಕ ಐಕ್ಯತೆಯನ್ನು ಸಾಧಿಸಿ ಕನ್ನಡ ಪ್ರಜ್ಞೆಯನ್ನು ಮೂಡಿಸುವಲ್ಲಿ ಹಲವಾರು ಪತ್ರಿಕೆಗಳು ಶ್ರಮಿಸಿದವು. ಮೈಸೂರಿನಲ್ಲಿ ಸಾಧ್ವಿ, ಮತ್ತು ದಿ ಸ್ಟಾರ್, ಹುಬ್ಬಳ್ಳಿಯಲ್ಲಿ ಪ್ರಪಂಚ, ಬೆಂಗಳೂರಿನಲ್ಲಿ ಪ್ರಜಾಮತ, ತಾಯಿನಾಡು, ವೀರಕೇಸರಿ ಮತ್ತು ವಿಶ್ವಕರ್ನಾಟಕ, ಮಂಗಳೂರಿನಲ್ಲಿ ರಾಷ್ಟ್ರಬಂಧು ಮತ್ತು ನವಭಾರತ, ಧಾರವಾಡದಲ್ಲಿ ವಾಗ್ಭೂಷಣ ಪತ್ರಿಕೆಗಳು ಅವುಗಳಲ್ಲಿ ಪ್ರಮುಖವಾದವುಗಳು.

**ಕರ್ನಾಟಕದ ಏಕೀಕರಣ**

1947 ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ದೊರೆತ ನಂತರ ಭಾಷಾವಾರು ಪ್ರಾಂತ್ಯಗಳ ರಚನೆಯಾಗುತ್ತದೆ ಎಂಬ ಕನ್ನಡಿಗರ ಆಸೆ–ಆಕಾಂಕ್ಷೆಗಳನ್ನು ಈಡೇರಿಸದ ಕೇಂದ್ರ ಸರ್ಕಾರ ಭಾಷಾವಾರು ಪ್ರಾಂತ್ಯಗಳ ರಚನೆಯ ಸಾಧಕ– ಬಾಧಕಗಳ ಕುರಿತು ವರದಿ ನೀಡಲು ನೇಮಕವಾದ ಧಾರ್ ಸಮಿತಿ ಮತ್ತು ಜೆ.ವಿ.ಪಿ ಸಮಿತಿಯ ಶಿಫಾರಸ್ಸುಗಳಿಗೆ ಅನುಗುಣವಾಗಿ ದೇಶದ ಐಕ್ಯತೆಯನ್ನು ಕಾರಣವನ್ನು ನೀಡುತ್ತಾ, ಭಾಷಾವಾರು ಪ್ರಾಂತ್ಯಗಳ ರಚನೆಯನ್ನು ಮುಂದೂಡುತ್ತಾ ಬಂದಿತು. ಪೊಟ್ಟಿ ಶ್ರೀರಾಮುಲು ಅವರು ಆಮರಣಾಂತ ಉಪವಾಸದಿಂದ ಮರಣಹೊಂದಿದ ನಂತರ ಅನಿವಾರ್ಯವಾಗಿ ಆಂಧ್ರ ಪ್ರದೇಶ ರಾಜ್ಯವನ್ನು ರಚಿಸಿದ ಕೇಂದ್ರ ಸರ್ಕಾರ ದೇಶದ ತುಂಬಾ ಭಾಷಾವಾರು ರಾಜ್ಯಗಳ ರಚನೆಯ ಕೂಗು ಹೆಚ್ಚಳಗೊಂಡ ಪರಿಣಾಮವಾಗಿ ಫಜಲ್ ಅಲಿ ಆಯೋಗವನ್ನು ರಚಿಸಿ, ಆ ಆಯೋಗದ ಶಿಫಾರಸ್ಸಿಗೆ ಅನುಗುಣವಾಗಿ 1956 ರಲ್ಲಿ 14 ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರಾಂತ್ಯಗಳನ್ನು ರಚಿಸಿತು. ಹೀಗೆ ರಚನೆಗೊಂಡ ಭಾಷಾವಾರು ಪ್ರಾಂತ್ಯಗಳಲ್ಲಿ ಕನ್ನಡ ಮಾತನಾಡುವ ಪ್ರಾಂತ್ಯಗಳನ್ನು ಸೇರಿಸಿ ರಚಿಸಿದ ರಾಜ್ಯವೇ ವಿಶಾಲ ಮೈಸೂರು ರಾಜ್ಯವಾಯಿತು. ಆ ಮೂಲಕ ಶತ–ಶತಮಾನಗಳಿಂದ ಕರ್ನಾಟಕದ ಏಕೀಕರಣಕ್ಕೆ ಶ್ರಮಿಸಿದ ಮಹಾನ್ ಚೇತನಗಳ ಹೋರಾಟಕ್ಕೆ ಅಂದು ನ್ಯಾಯ ದೊರಕಿತು.

**ಸಮಾರೋಪ**

ಇತಿಹಾಸ ಪೂರ್ವಕಾಲದಿಂದ ಆರಂಭಿಸಿ ಅಶೋಕನ ಶಾಸನಗಳಲ್ಲಿ ದೊರೆತಿರುವ ಕನ್ನಡ ನಾಡಿನ ಮಾಹಿತಿಯ ಆಧಾರದ ಮೇಲೆ ವಿಶಾಲ ವ್ಯಾಪ್ತಿಯನ್ನು ಹೊಂದಿದ್ದ ಕನ್ನಡ ನಾಡು ಕಾಲಾಂತರದಲ್ಲಿ ಸುಮಾರು 20 ಪ್ರಾಂತ್ಯಗಳಲ್ಲಿ ಹರಿದು ಹಂಚಿ ಹೋಗಿತ್ತು. ನಾಡಿನ ಭಾಷೆ, ಸಾಹಿತ್ಯ, ಸಂಸ್ಕೃತಿ, ಮತ್ತು ಅಸ್ಮಿತೆಯ ಗುರುತಿಗಾಗಿ ನಾಡು–ನುಡಿಯ ಸಂರಕ್ಷಣೆಗಾಗಿ ಭಾರತದ ಸ್ವಾತಂತ್ರ್ಯ ಹೋರಾಟದೊಂದಿಗೆ ನಾಡಿನ ಏಕೀಕರಣಕ್ಕಾಗಿ ಕನ್ನಡಿಗರು ಸವೆಸಿದ ದಾರಿ ಬಹು ದೀರ್ಘ ಮತ್ತು ಕಷ್ಟದಾಯಕವಾಗಿತ್ತು. ಇಂತಹ ಹೋರಾಟದ ಮೂಲಕ ಪಡೆದ ಏಕೀಕರಣದಲ್ಲಿ ಮುಂಬೈ ಕರ್ನಾಟಕದ ಪಾತ್ರ ಪ್ರಮುಖವಾಗಿದೆ. ಕರ್ನಾಟಕದ ಏಕೀಕರಣದೊಂದಿಗೆ ಅಖಂಡ ಕರ್ನಾಟಕದ ಪರಿಕಲ್ಪನೆ ಈಡೇರಿದ್ದರೂ, ಭಾಷಾವಾರು ರಾಜ್ಯಗಳ ರಚನೆಯ ಸಂದರ್ಭದಲ್ಲಿ ಕನ್ನಡ ಮಾತನಾಡುವ ಅನೇಕ ಪ್ರದೇಶಗಳು ಅನ್ಯ ರಾಜ್ಯಗಳಿಗೆ ಸೇರಿದ್ದು, ನೆರೆಹೊರೆ ರಾಜ್ಯಗಳೊಂದಿಗೆ ಗಡಿ ಸಮಸ್ಯೆ ಮತ್ತು ನದಿ ನೀರಿನ ಸಮಸ್ಯೆಗಳನ್ನು ರಾಜ್ಯ ಎದುರಿಸುತ್ತಿದೆ. ಈ ಸಮಸ್ಯೆಗಳನ್ನು ಪರಸ್ಪರ ಸಹಕಾರದ ಮೂಲಕ ಬಗೆ ಹರಿಸಿಕೊಳ್ಳಲು ಪ್ರಯತ್ನಿಸುವುದರೊಂದಿಗೆ ಕಾನೂನಾತ್ಮಕ ಹೋರಾಟವನ್ನು

ಮುಂದುವರೆಸುವ ಅನಿವಾರ್ಯತೆ ಇದೆ.

### ಪರಾಮರ್ಶನ ಗ್ರಂಥಗಳು:


1. ಗೋಪಾಲ್ ರಾವ್ ಎಚ್‌ಎಸ್(,(2012) ಕರ್ನಾಟಕ ಏಕೀಕರಣ ಇತಿಹಾಸ ನವ ಕರ್ನಾಟಕ ಪಬ್ಲಿಕೇಶನ್ಸ್.
2. ಅಥಣಿ ಬಸಪ್ಪ, ತಡಸದ ಕಮಲಾಕ್ಷಿ, ರಾಮಸ್ವಾಮಿ ಹರೀಶ್, (2023), ಉತ್ತರ ಕರ್ನಾಟಕದ ಅಭಿವೃದ್ಧಿ ಮತ್ತು ರಾಜಕಾರಣ, ಜಡಭಾರತ ಪ್ರಕಾಶನ, ಧಾರವಾಡ.
3. ಚಂದ್ರಶೇಖರ್ ಎಸ್, (2005), ಏಕೀಕರಣ ಒಂದು ಕಥನ ಸತ್ಯ ಶ್ರೀ ಪ್ರಿಂಟರ್ಸ್ ಬೆಂಗಳೂರು.
4. ಗವಿಮಠ ಬಿಎಸ್, (2011), ಬೆಳಗಾವಿ ಕನ್ನಡ ಕನ್ನಡಿಗ ಪ್ರಗತಿ ಪ್ರಿಂಟ್ ಬೆಂಗಳೂರು.
5. ನಾಗಭೂಷಣ್ ಡಿಎಸ್, (2009), ಕನ್ನಡ ಕರ್ನಾಟಕ ಸಂಕಥನಗಳು ವಿಸ್ಮಯ ಪ್ರಕಾಶನ ಮೈಸೂರು
6. ಪ್ರೊ. ಷೇಕ್ ಅಲಿ ಕರ್ನಾಟಕ ಚರಿತ್ರೆ
7. ಗೋವಿಂದರಾಜು. ಸಿ. ಆರ್. – ಕರ್ನಾಟಕ ಏಕೀಕರಣ ಹಾಗೂ ನಾಮಕರಣ
8. ಪಾಲಾಕ್ಷ – ಕರ್ನಾಟಕ ಇತಿಹಾಸ
9. Aparanti N R – History of Karnataka
10. Kamath Suryanath U – A Concise History of Karnataka



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.